ಇದಕ್ಕೆ ಸಮರ್ಥನೆ ಮಾಡುತ್ತಾ ಇಲ್ಲ. ಸರಕಾರವು ಇದಕ್ಕೆ ಉತ್ತೇಜನ ಕೊಡುತ್ತಾ ಇಲ್ಲ. ಇದನ್ನು ತಾವುಗಳು ಗಮನಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಜಗದೀಶ್‌ಶೆಟ್ಟರ್ : ಈ ಆನ್‌ಲೈನ್ ಲಾಟರಿಗೆ ನಿರ್ಬಂಧ ಹೇರಲು ಎಲ್ಲಾ ರೀತಿಯಲ್ಲೂ ಒತ್ತಡ ತರುವಂಥ ಕೆಲಸವನ್ನು ಮಾಡಬೇಕಾಗಿದೆ. ಒಂದು ಕಡೆಯಲ್ಲಿ ಸಮರ್ಥನೆ ಮಾಡಿಕೊಳ್ಳುವಂತಾದ್ದು, ಇನ್ನೊಂದು ಕಡೆಯಲ್ಲಿ ಆಡಬೇಡಿ ಎಂದು ಹೇಳಿಕೊಳ್ಳುವಂತಾದ್ದು ಆಗಬಾರದು. ಇದು ಸರಿಯಲ್ಲ. ರಾಜ್ಯ ಸರಕಾರದ ಈ ನಿಲುವು ಸರಿಯಾಗಿಲ್ಲ. ಇದನ್ನು ನಾವು ಪ್ರತಿಭಟಿಸುತ್ತಿದ್ದೇವೆ. ಇದನ್ನು ನಾವು ಪ್ರೊಟೆಸ್ಟ್ ಮಾಡುತ್ತಿದ್ದೇವೆ. ಆನ್‌ಲೈನ್ ಲಾಟರಿಗೆ ನಿರ್ಬಂಧ ಹೇರಬೇಕು. ಇದನ್ನು ಪ್ರೊಟೆಸ್ಟ್ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ. ತತ್‌ಕ್ಷಣವೇ ಆನ್‌ಲೈನ್ ಲಾಟರಿಗೆ ನಿರ್ಬಂಧ ಹೇರಬೇಕು.

(ಬಿಜೆಪಿಯ ಸನ್ಮಾನ್ಯಸದಸ್ಯರುಗಳವರು ಅಧ್ಯಕ್ಷರು ಪೀಠದ ಮುಂದಿನ ಭಾವಿಯಲ್ಲಿ ಬಂದು ಸೇರಿದರು)

(ಗೊಂದಲ):

ಅಧ್ಯಕ್ಷರು : ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.Dont take down anything ಎಲ್ಲರೂ ನಿಂತಿದ್ದಾರೆ.

(ಅಧ್ಯಕ್ಷರು ಆದೇಶದ ಮೇರೆಗೆ ರೆಕಾರ್ಡ್ ಮಾಡುವುದನ್ನು ನಿಲ್ಲಿಸಲಾಯಿತು)

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು : ಮಾನ್ಯ ಹೆಗಡೆಯವರು ಹೇಳುವುದು ಇನ್ನೇನು ಇದೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ ಲಾಟರೀಸ್ ರೆಗ್ಯುಲೇಷನ್ ಆಕ್ಟ್ ನಲ್ಲಿ section-4 of the Lotteries Regulation Act states the conditions subjec to which lotteries may be organised etc. Sub- Section (B) reads as follows : The State Government Shall Print the lottery tickets wherein the inprint and logo are made in such a manner that the authenticity of the lottery is ensured.ಈ ಆನ್‌ಲೈನ್ ಲಾಟರಿಯಲ್ಲಿ ಸ್ಟೇಟ್‌ಗವರ್ನಮೆಂಟ್‌ನ ಲೋಗೋ ಇಲ್ಲ.There is no authenticity.ಕರ್ನಾಟಕ ರಾಜ್ಯ ಲಾಟರಿ ಏನಿದೆ ಅದು that comes under Regulation Act, on line lotteries does not come under Regulation Act. ಅದನ್ನು ಮಾನ್ಯ ಮಂತ್ರಿಯವರು ಸೆಟ್‌ರೈಟ್ ಮಾಡಬೇಕೆಂದು ಹೇಳಿ ಅವರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಇನ್ನೂ 2-3 ಪ್ರಶ್ನೆಗಳು ಬಹಳ ಮುಖ್ಯವಾದುದು ಅಂದರೆ. ಶಾಸಕರ ನಿಧಿಗೆ ಸಂಬಂಧಪಟ್ಟದ್ದು 2-3ಇದ್ದುವು. ಈ ಪ್ರಶ್ನೆಗಳನ್ನೆಲ್ಲಾ ಮುಂದೆ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ ವೇಳೆಯು ಮುಗಿಯಿತು.

ಶ್ರೀ ಪಿ. ಜೆ. ಆರ್ . ಸಿಂಧ್ಯ : ಮಾನ್ಯ ಅಧ್ಯಕ್ಷರೆ ಪ್ರಶ್ನೋತ್ತರ ವೇಳೆ ಮುಗಿದಿದೆ. ಸಭೆಯನ್ನು ಈ ರೀತಿ ನಡೆಸುವುದಕ್ಕೆ ನಮ್ಮದೇನು ತಕರಾರು ಇಲ್ಲ ಆದರೆ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ, ಅದು ಅವರಿಗೂ ಕೂಡ ಗೊತ್ತಿದೆ. ನಾವು ಅವರಿಂದ ಏನು ಭರವಸೆಯನ್ನು ಕೇಳಿದ್ದೆವು. ಈ ಮೂಲಕ ಸುಮಾರು 25